ಶ್ರೀ ಹೆಚ್.ಎಲ್. ತಿಮ್ಮೇಗೌಡ —ಅಧ್ಯಕ್ಷರೆ, ಸಮುದಾಯ ಆರೋಗ್ಯ ಮಾರ್ಗದರ್ಶಿಗಳು ಸರ್ಕಾರಿ ಅಧಿಕಾರಿಗಳಲ್ಲ. ವಿಲೇಜ್ ಹೆಲ್ತ್ ಗೈಡ್ಸ್ ಎಂದು ಕೇಂದ್ರ ಸರ್ಕಾರ ಯೋಜನೆ ಮಾಡಿ ಅವರಿಗೆ ತಿಂಗಳಿಗೆ ೫೦ ರೂಪಾಯಿ ಗೌರವಧನ ಕೊಡುವುದು, ೫೦ ರೂಪಾಯಿ ಔಷಧಿ ಕೊಡಬೇಕೆಂದು ಮಾಡಿರುವುದು. ನಾವು ಕೇಂದ್ರ ಸರ್ಕಾರದವರಿಗೂ ಕೂಡ ಗೌರವಧನ ಜಾಸ್ತಿ ಮಾಡಬೇಕೆಂದು ಕೇಳಿದ್ದೇವೆ. ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿಲ್ಲ. ರಾಜ್ಯ ಸರ್ಕಾರ ಐದಾರು ವರ್ಷಗಳ ಹಿಂದೆ ಕೊಟ್ಟು ಆಯಿತು. ಆದನ್ನು ಆಗಲೇ ನಿಲ್ಲಿಸಿ ನಾಲ್ಕೈದು ವರ್ಷಗಳಾಗಿವೆ. ಕೇಂದ್ರ ಸರ್ಕಾರ ಕೊಡತಕ್ಕ ೫೦ ರೂಪಾಯಿಗೆ ಇನ್ನು ೧೦ ರೂಪಾಯಿ ಸೇರಿಸಿಕೊಡಬೇಕೆಂದರೂ ಒಂದು ವರ್ಷಕ್ಕೆ ೩೦-೪೦ ಲಕ್ಷ ರೂಪಾಯಿ ಆಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಕೊಡಲಿಕ್ಕೆ ಆಗುವುದಿಲ್ಲ. ಇವರುಗಳನ್ನು ಸರ್ಕಾರಿ ಅಧಿಕಾರಿಗಳು ಎಂದು ನೇಮಕ ಮಾಡಿಲ್ಲ. ಆ ಊರಿನಲ್ಲೇ ಇರತಕ್ಕವರಿಗೆ ೫೦ ರೂಪಾಯಿ ಔಷಧಿ ಕೊಡುತ್ತಿದ್ದೇವೆ. ಅದು ಕೇಂದ್ರ ಸರ್ಕಾರದ ಯೋಜನೆ. ಇನ್ನು ಹಳ್ಳಿಗಳಲ್ಲಿ ಸೂಲಗಿತ್ತಿಯವರನ್ನು ಅಪಾಯಿಂಟ್ ಮಾಡಬೇಕಾದರೆ ಅವರಿಗೆ ಒಂದು ತರಬೇತಿ ಕೊಟ್ಟು ಮಾಡತಕ್ಕದ್ದು ಇದೆ. ಅವರುಗಳಿಗೆ ಒಂದು ಮನೆಗೆ ೫-೬ ರೂಪಾಯಿ ಕೊಡತಕ್ಕದ್ದು ಇದೆ. ಅವರಿಗೆ ಈ ಕೆಲಸ ಕೊಡುವುದು ಒಳ್ಳೆಯದು. ಅಲ್ಲೇ ಇರತಕ್ಕವರಿಗೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗ ವೆಂಕಟರಾಮಯ್ಯನವರು ಹೆಚ್ಚಿಗೆ ದುಡ್ಡು ಕೊಡಬೇಕೆಂದು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಸೆಂಟ್ರಲ್ ಹೆಲ್ತ್ ಕೌನ್ಸಲ್ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿಲಿಕ್ಕಿದ್ದ ಅವರು ಒಪ್ಪಿಕೊಂಡಿಲ್ಲ. ನಮ್ಮ ಹಣಕಾಸಿನ ಸ್ಥಿತಿಯಲ್ಲಿ ಹೆಚ್ಚಿಗೆ ಕೊಡಲಿಕ್ಕೆ ಆಗುವುದಿಲ್ಲ. ಅವರು. ನಮ್ಮ ಸಮಾಜ ಸುಧಾರಕರೇ ಹೊರತು ಸರ್ಕಾರಿ ಅಧಿಕಾರಿಗಳಲ್ಲ. ಆದ್ದರಿಂದ, ಹೆಚ್ಚಿಗೆ ಮಾನ್ಯೆವೇ ಸಾಧ್ಯವಿಲ್ಲ.

(೪) ೧೯೮೫ನೇ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ನೀಡಿದ ಚಿನ್ನದ ಪದಕಗಳಲ್ಲಿ ಕಂಡು ಬಂದಿರುವ ಕಡಿಮೆ ಚಿನ್ನದ ಪ್ರಮಾಣ

ಶ್ರೀ ಬಿ. ಎ. ಉಮಾರಬ್ಬ.—ಮಾನ್ಯ ಅಧ್ಯಕ್ಷರೇ, ಚಲನಚಿತ್ರ ಪ್ರಶಸ್ತಿಗಳನ್ನು ೧೯೮೫ರಲ್ಲಿ ವಿತರಣೆ ಮಾಡಲಾಯಿತು. ಈ ಪೈಕಿ ಉತ್ತಮ ಚಿತ್ರ, ನಟ, ನಟಿ, ಇತ್ಯಾದಿಗಳಿಗೆ ಹಲವಾರು ಚಿನ್ನದ ಪದಕ ಗಳನ್ನು ನೀಡಲಾಗಿದೆ. ಈ ಚಿನ್ನದ ಪದಕಗಳನ್ನು ಬೇರೆ ಬೇರೆ ವರ್ಷಗಳಲ್ಲಿ ತಯಾರಿಸಲಾಗಿದ್ದು ಅಂದಿನ ಮಾರುಕಟ್ಟೆಗೆ ತಕ್ಕಂತೆ ತಯಾರಿಕರಿಗೆ ಮೊತ್ತವನ್ನೂ ನೀಡಲಾಗಿದೆ. ಯುವ ಜನತಾ ಪ್ರಧಾನ ಕಾರ್ಯ ದರ್ಶಿ ಕೋಡಿಹಳ್ಳಿ ಇವರಿಗೆ ಕೊಡಲಾಗಿದೆ. ಆದರೆ. ಅನೇಕ ಕಲಾವಿದರು ನೀಡಿರುವ ದೂರಿನ ಪ್ರಕಾರ ಆ ಚಿನ್ನದ ಪದಕದಲ್ಲಿ ಚಿನ್ನದ ಅಂಶ ಅತ್ಯಂತ ಕಡಿಮೆ, ಅದಕ್ಕೆ ನೀಡಲಾಗಿರುವ ಮೊತ್ತ ಅತಿ ಹೆಚ್ಚು ಎನ್ನುವುದು ಸ್ಪಷ್ಟವಾಗಿದೆ. ಈ ತಯಾರಿಕಾ ಕೆಲಸವನ್ನು ಪ್ರತಿ ವರ್ಷವೂ ಏಕೈಕ ಸಂಸ್ಥೆ ನೀಡಲಾಗಿದ್ದು, ಇದಕ್ಕಾಗಿ ಟೆಂಡರ್ ಕರೆಯಲಾದ ತೀರ್ಮಾನಿಸಲಾದ ಹಿನ್ನಲೆಯಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರದ ಕೈವಾಡವಿದೆ. ಲಕ್ಷಾಂತರರೂಪಾಯಿಗಳ ಅಪವ್ಯಯವಾಗಿ ಮಧ್ಯವರ್ತಿಗಳ ದೊಡ್ಡ ಜಾಲವಿದೆ ಎಂದು ಶಂಕಿಸಲಾಗಿದೆ. ಇದೇಪರಿಸ್ಥಿತಿ ಸರ್ಕಾರದ ತಾಳಿಗೂ ಬರಬಹುದೆಂಬ ಶಂಕೆ ಇದೆ. ಪ್ರತಿಯೊಂದು ಚಿನ್ನದ ಪದಕವನ್ನು ಪರೀಕ್ಷಿಸಿ, ಅದರಲ್ಲಿರುವ ಚಿನ್ನದ ಅಂಶವನ್ನು ಹತ್ತೆ ಹಚ್ಚಿ ದುರ್ವ್ಯವಹಾರ ನೀಡುವ ಬಗ್ಗೆ ಮಾನ್ಯ ನಡೆದಿದ್ದಲ್ಲಿ ಅದಕ್ಕೆ ಕಾರಣರಾದವರನ್ನು ಶಿಕ್ಷಿಸಿ ಪ್ರಶಸ್ತಿ ವಿಜೇತರಿಗೆ ನೈಜ ಪದಕವನ್ನು ಹೊಸತಾಗಿ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಅವರಿಂದ ಉತ್ತರ ತರಿಸಿ ಸನ್ಮಾನ್ಯ ಸದಸ್ಯರಿಗೆ ಒದಗಿಸತಕ್ಕ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಬಾಬು ರೆಡ್ಡಿ ತುಂಗಳ್, ಗೈರು ಹಾಜರಿ.